ಮಂತ್ರಪುಷ್ಪಗಳನ್ನು ಉದುರಿಸಲಿ, ತನಗಲ್ಲ ಎನ್ನುವಂತೆ ಕೊಡವಿಕೊಳ್ಳುತ್ತಾಳೇ ವಿನಾ ಮೈಗೆ ಅಂಟಿಸಿಕೊಳ್ಳುವ ಜಾತಿಯಲ್ಲ. ಮನೆಯ ಯಾರದ್ದೋ ಮೇಲಿನ ಸಿಟ್ಟನ್ನು ಅವಳ ಮೇಲೆ ಕಾರಿಕೊಂಡ ಪ್ರಸಂಗಗಳು ಅವೆಷ್ಟೋ. ಒಟ್ಟಿನಲ್ಲಿ ಚಂದ್ರಿ ಹೊಂದಿಕೆಯಾಗಿಬಿಟ್ಟಿದ್ದಳು. ಅಭ್ಯಾಸವಾಗಿಬಿಟ್ಟಿದ್ದಳು. ಅನಿವಾರ್ಯವಾಗಿದ್ದಳು ಕೂಡಾ. ಎಷ್ಟು ಅನಿವಾರ್ಯ ಅಂದರೆ ತಲೆಕೂದಲಿಗೆ ಮೆಹಂದಿ ಹಚ್ಚಿಕೊಳ್ಳುವ ಹುರುಪು ನನ್ನ ನೆತ್ತಿಗೇರಿದರೆ ಅದಕ್ಕೆ ಸಾಥ್ ಕೊಡುವವಳು ಈ ಚಂದ್ರಿಯೇ. ಗಂಟೆಗಟ್ಟಲೆ ಕೂತು ಮೆಹಂದಿ ಹಚ್ಚುತ್ತಾಳೆ. ನನಗೇ 'ಪಾಪ' ಅನ್ನಿಸುತ್ತಾ 'ಹೊತ್ತಾಗಲ್ವೇನೇ?' ಕೇಳಿದರೆ 'ಆಗ್ಲಿ' ಅನ್ನುತ್ತಾಳೆ ಅಮಾಯಕಳಾಗಿ, ಮುಂದಿನ ಮನೆಯಲ್ಲಿ ಬೈದರೆ ಬೈಸಿಕೊಳ್ಳಲು ಸಿದ್ಧಳಾಗಿ. ಕೃತಜ್ಞತಾಪೂರ್ವಕವಾಗಿ ಹತ್ತಿಪ್ಪತ್ತು ರೂಪಾಯಿ ಕೊಟ್ಟರೆ ಅದು ಎಷ್ಟರ ನೋಟು ಎಂದೂ ನೋಡದೆ, ನೋಡಿದರೆ ಅವಳಿಗೆ ಗೊತ್ತಾಗುತ್ತಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ, ವೇಲ್‌ನ ತುದಿಯಲ್ಲಿ ಗಂಟು ಕಟ್ಟಿ,

'ಏನ್ಮಾಡ್ತೀಯೇ ದುಡ್ಡು?' ಎಂದು ಕೇಳಿದರೆ ಅದೇ ಉತ್ತರ,

'ಚಿಕ್ಕಮ್ಮಂಗೆ ಕೊಡ್ತೀನಿ...'

'ಪಾನಿ ಪೂರಿ ಗೀನಿಪೂರಿ ತಿನ್ನಾಬರ್ದಾ?'

'ಚಿಕ್ಕಮ್ಮ ಕೊಡಿಸ್ತಾರೆ.'

ಒಳ್ಳೇ ಚಿಕ್ಕಮ್ಮ, ಮೆಚ್ಚುಮದ್ದು ಹಾಕಿ ಸವತಿಯ ಮಗಳನ್ನು ಚೆನ್ನಾಗಿ ಸಾಕಿಕೊಂಡಿದ್ದಾಳೆ. ಹೊಡೆತ ಇಲ್ಲ, ಬಡಿತ ಇಲ್ಲ. ಶೋಷಣೆಯ ಮತ್ತೊಂದು ಪರಿ? ನನ್ನ ತಲೆಗೆ ಮೆಹಂದಿ ಹಚ್ಚಿ ಕೆಂಬಣ್ಣಕ್ಕೆ ತಿರುಗಿದ ತನ್ನ ಎರಡೂ ಕೈಗಳನ್ನು ಬೀಸಣಿಗೆಯಂತೆ ಅಗಲಿಸಿ ನೋಡಿಕೊಂಡು ಹಿಗ್ಗುತ್ತಿದ್ದ, ನಮ್ಮ ಪರಿವಾರದವಳಲ್ಲದಿದ್ದರೂ ಪರಿವಾರದವಳಾಗಿದ್ದ ಹುಡುಗಿಗೆ ಮದುವೆ.

***

'ಮದುವೆ ಮಾಡಲ್ವಂತೇನೇ ನಿಂಗೆ?' ಕೆಣಕಿದ್ದೇನೆ ಹಲವು ಸಲ. ಅದೊಂದು ಕುತೂಹಲ. ಹದಿವಯಸ್ಸಲ್ಲೇ ಹುಡುಗಿಗೆ ಮದುವೆ ಮಾಡುವುದು, ಕುಡುಕ ಗಂಡ ಹೆಂಡತಿಗೆ ಇನ್ನಿಲ್ಲದ ಹಿಂಸೆ ಕೊಡುವುದು, ಅಷ್ಟರಲ್ಲಿ ಎರಡೋ ಮೂರೋ ಮಕ್ಕಳಾಗಿರುವುದು, ಮದುವೆಯಾದ ತಪ್ಪಿಗೆ ಅವರಿವರ ಮನೆಯಲ್ಲಿ ಮೈಮುರೀ ದುಡಿದು ತಾಯಿ ಆ ಮಕ್ಕಳ ಆರೈಕೆಯ ಹೊಣೆ ಹೊತ್ತುಕೊಳ್ಳುವುದು, ಅನೇಕರ ಬಾಯಿಂದ ಹೆಚ್ಚುಕಡಿಮೆ ಈ ಕತೆ ಕೇಳಿದ್ದಿದೆ. 'ಯಾರ ಮನೆಯಲ್ಲಿ ಕುಡಿಯಲ್ಲ?' ಅನ್ನುವುದನ್ನು ಈ ಹೆಂಗಸರು ಅರಗಿಸಿಕೊಂಡುಬಿಟ್ಟಿರುತ್ತಾರೆ. ಇದೊಂದು ಅಪರಿಹಾರ್ಯ ಸತ್ಯ ಎಂದು ನಂಬಿಕೊಂಡಿರುತ್ತಾರೆ. ಜಗಳ, ಕದನ, ಕೆಲವೊಮ್ಮೆ ಚಂದ್ರಿಯ ತಾಯಿಯಂತೆ ಇನ್ಯಾರದೋ ಬೆನ್ನು ಹತ್ತಿ ಓಡಿ ಹೋಗುವುದು, ಇಲ್ಲಾ ಗಂಡನಾದವನು ಹೆಂಡತಿಯನ್ನು ಬಿಟ್ಟೋಡುವುದು, ಅಥವಾ ಎಲ್ಲಾ ಸೈಸಿಕೊಂಡು ಸಂಸಾರ ಉಳಿಸಿಕೊಳ್ಳುವುದು, ತಿರುಗುತ್ತಿರುತ್ತದೆ ಜೀವನಚಕ್ರ.

ಹೀಗಿರುವಾಗ ಚಂದ್ರಿ, ಎಷ್ಟೋ ವರ್ಷ ಎಂಬ ಅರಿವೇ ಇಲ್ಲದ ಚಂದ್ರಿ, ಓ ಅಂದರೆ ಠೋ ಅನ್ನಲು ಬರದ ಪೆದ್ದಿ, ಅವರಿವರ ಮನೆಯ ಕಸ ಬಾಚುವುದರಲ್ಲಿ ಜೀವನ ಸವೆಸುತ್ತಿರುವುದನ್ನು ಕಂಡು ಕೆಲವೊಮ್ಮೆ ಕನಿಕರ, ಕೆಲವೊಮ್ಮೆ ಬೇಸರ. ಮದುವೆಯ ಮಾತೆತ್ತಿದರೆ ಚಂದ್ರಿಯದು ಅದೇ ಸಿದ್ಧ ಉತ್ತರ,

'ಅಪ್ಪ ಸಾಲ ಮಾಡಿದಾನೆ. ಅದು ತೀರಿದ ಮೇಲೆ ಮದುವೆ...'

'ಯಾತಕ್ಕೇ ಸಾಲ ಮಾಡಿದ್ದು?'

'ಊರಲ್ಲಿ ಮನೆ ಕಟ್ಟಿಸ್ತಿದಾನೆ ಆಂಟಿ. ಮೂರು ರೂಮಿರೋ ಮನೆ...'

ನಾನು ಪ್ರಶ್ನೆ ಕೇಳಿ ಅದೆಷ್ಟೋ ವರ್ಷಗಳಾಗಿದ್ದರೂ ಇನ್ನೂ ಅವರ ಮನೆ ಕಟ್ಟಿ ಮುಗಿದಿಲ್ಲ. ಸಾಲ ತೀರಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಿಂದ ಗಂಟೆ, ಎರಡು ಗಂಟೆಗಳಷ್ಟು ದೂರದ ಹಳ್ಳಿಯಲ್ಲಿ ಅಷ್ಟಿಷ್ಟು ಜಮೀನು ಇರುವವರು ಅದನ್ನು ಕುಟುಂಬದ ಒಬ್ಬರ ಸುಪರ್ದಿಗೆ ಒಪ್ಪಿಸಿ ಪಟ್ಟಣ ಸೇರಿಕೊಳ್ಳುವುದು ಮಾಮೂಲಿನ ಸಂಗತಿ. ತಮ್ಮ ಅನುಭವಕ್ಕೆ ತಕ್ಕ ಕೆಲಸ ಕಂಡುಕೊಂಡು ಅವರ ಸಂಸಾರದ ಮಟ್ಟಿನ ಜೀವನ ನಿರ್ವಹಣೆಯಾದರೆ ಸಾಕೇ ಸಾಕು. ಗಂಡಸರು ತರಕಾರಿ ಮಾರಾಟ, ಗಾರೆ ಕೆಲಸ, ಕೈಗಾಡಿಗಳಲ್ಲಿ ಬಟ್ಟೆ ಇಸ್ತ್ರಿ, ಹೊಲಿಗೆ ಕೆಲಸ, ಮನೆಮನೆಗೆ ನಂದಿನಿ ಹಾಲಿನ ಸಪ್ಲೈ, ಹೀಗೆ ಏನಾದರೊಂದರಲ್ಲಿ ಪಳಗಿದರೆ ಹೆಣ್ಣುಮಕ್ಕಳು ಚಂದ್ರಿಯ ಹಾಗೆ ಮನೆಗೆಲಸ ಮಾಡುತ್ತಾ ಸಂಪಾದನೆ. ಹಬ್ಬ ಹರಿದಿನ, ಜಾತ್ರೆ ತೇರು ಅಂದರೆ ಹಳ್ಳಿಗೆ ದೌಡು. ರೇಷನ್ ಕಾರ್ಡು ಮುಂತಾದ ದಾಖಲೆಗಳಿಗೆ ಹಳ್ಳಿಯ ವಿಳಾಸ. ಉದ್ಧಾರವಾದವರಂತೆ ಕುಡಿತದ ಚಟ ಹತ್ತಿಸಿಕೊಂಡು ಹೊಡೆತ ಬಡಿತಗಳಲ್ಲಿ ದಿನ ತಳ್ಳುವುದು ಹಲವರ ಮನೆಯ ಕಥೆ, ವ್ಯಥೆ.

***

ಅವತ್ತೊಂದು ದಿನ ಚಂದ್ರಿ ಹೇಳದೆ ಕೇಳದೆ ಕೆಲಸಕ್ಕೆ ಗೈರು. ಯಾವತ್ತಿನಂತೆ ಹೊತ್ತು ತಪ್ಪಿಸಿ ಹಾಜರಾಗುತ್ತಾಳೆಂದು ಕಾದು ಕಾದು ಸಾಕಾಗಿ, ಮುಸುರೆ ಪಾತ್ರೆಗಳು ಇಟ್ಟಲ್ಲೇ ಒಣಗಿ, ನೆನೆಸಿಟ್ಟ ಬಟ್ಟೆಗಳು ಹಳಸುತ್ತಾ, ಸಿಟ್ಟು ಪರಾಕಾಷ್ಠೆಗೇರಿತ್ತು. ಯಾಕೆ ಈ ಮನೆಗೆಲಸದವರನ್ನು ಇಷ್ಟೊಂದು ನೆಚ್ಚಿಕೊಳ್ಳುತ್ತೇವೆ? ಅವರು ನಾಲ್ಕಾರು ಮನೆಯ ಕೆಲಸ ಮಾಡಬಹುದಾದರೆ ನಮ್ಮೊಬ್ಬರ ಮನೆಯ ಕೆಲಸ ನಾವು ಮಾಡಿಕೊಳ್ಳಲಾಗದಷ್ಟು ಅಸಹಾಯಕತೆಯೇ? ಅಥವಾ ಸೋಮಾರಿತನ? ಅಥವಾ ಪ್ರತಿಷ್ಠೆ? ಅಥವಾ ದುಡ್ಡು ಬಿಸಾಕುವ ತಾಕತ್ತಿರುವಾಗ ವೃಥಾ ಯಾಕೆ ಮೈಕೈ ಹುಡಿ ಮಾಡಿಕೊಳ್ಳಬೇಕು ಎನ್ನುವ ಸಾಹುಕಾರಿಕೆಯ ಧೋರಣೆ? ಅಲ್ಲಲ್ಲ, ಅದೂ ಒಂದು ಅಭ್ಯಸ್ಥವಾಗಿರುವ ಜೀವನಶೈಲಿ. ಆಹಾರದ ಶೈಲಿಯಂತೆ ದಿನಚರಿಯ ರೂಢಿಯನ್ನೂ ದೇಹಕ್ಕೆ ಅಭ್ಯಾಸ ಮಾಡಿಸಿಬಿಟ್ಟಿರುತ್ತೇವೆ. ಮತ್ತು ಜೈವಿಕ ಗಡಿಯಾರ ಅದಕ್ಕೆ ಹೊಂದಿಕೊಂಡುಬಿಟ್ಟಿರುತ್ತದೆ. ವ್ಯಾಯಾಮ ಎಂದು ಗಂಟೆಗಟ್ಟಲೆ ವಾಕಿಂಗ್ ಮಾಡಿ, ಯೋಗಾಭ್ಯಾಸ ಮಾಡಿ, ದೇಹಾರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬಯಸುವವರಿಗೂ ತಮ್ಮದೇ ಮನೆಗೆಲಸದ ಕುರಿತು ಕೈಲಾಗದೆಂಬ ಮನೋಭಾವ. ವಿಚಿತ್ರ, ಆದರೂ ಸತ್ಯ.

ಮರುದಿನ ಯಥಾಪ್ರಕಾರ ಕೆಲಸಕ್ಕೆ ಬಂದವಳ ಮೇಲೆ ಕಿಡಿಕಾರಿದ್ದೆ. 'ಮೊದಲೇ ಬರಲ್ಲ ಅಂತ ಹೇಳೋಕೆ ಏನು ಧಾಡಿ ಬಡಿದಿತ್ತು?' ಕೇಳಿದ್ದೆ.

'ಹುಡುಗ ಬಂದಿದ್ದ ಆಂಟೀ, ನನ್ನ ನೋಡೋಕೆ...' ಅಂದಿದ್ದಳು ಚಂದ್ರಿ ತಣ್ಣನೆಯ ದನಿಯಲ್ಲಿ.

ಏರಿದ್ದ ಸಿಟ್ಟು ಥುಸ್ಸನೆ ಇಳಿದಿತ್ತು. 'ಇನ್ನು ಇವಳ ಮದುವೆ ಗೊತ್ತಾಗಿ ಗಂಡನ ಮನೆಗೆ ಎದ್ದು ಬಿಡುತ್ತಾಳಾ? ಅಂದಿದ್ದೆಲ್ಲಾ ಅನ್ನಿಸಿಕೊಂಡು ಕೆಲಸ ಮಾಡುವವರು ಇನ್ನೆಲ್ಲಿ ಸಿಗುತ್ತಾರೆ?' ಮನದೊಳಗೆ ಆತಂಕ. ಎಂಥಾ ಪರಿಸ್ಥಿತಿಯಲ್ಲೂ ಮುನ್ನೆಲೆಗೆ ಬರುವುದು ಮನುಷ್ಯನ ಸ್ವಾರ್ಥ. ನನ್ನ ಯೋಚನಾಧಾಟಿಯ ಕುರಿತು ಪಶ್ಚಾತ್ತಾಪವಾಗಿತ್ತು ನನಗೇ.

'ಒಪ್ಕೊಂಡ್ರೇನೇ?' ಕೇಳಿದ್ದೆ.

'ದುಡ್ಡು ಕೇಳ್ತಿದಾರೆ...'

'ಎಷ್ಟಂತೆ?'

ಹೆಬ್ಬೆರಳ ಪಕ್ಕದ ಎರಡು ಬೆರಳುಗಳನ್ನು ಕುಣಿಸುತ್ತಾ ಹೇಳಿದ್ದಳು ಚಂದ್ರಿ,

'ಎರಡು ಲಕ್ಷ...'

'ಎರಡು ಲಕ್ಷ!' ಆಶ್ಚರ್ಯದಿಂದ ಕೇಳಿದ್ದೆ.

ಹೂಂಗುಟ್ಟಿದ್ದಳು ಹುಡುಗಿ. ಮನೆಯಲ್ಲಿ ಮಾತಾಡಿಕೊಂಡಿರಬಹುದಾದ, ಚರ್ಚೆಯಾಗಿರಬಹುದಾದ, ಎರಡು ಲಕ್ಷ ಎನ್ನುವ ಅಂಕೆ, ಅದರಲ್ಲೂ ಮದುವೆಯಂಥಾ ಅವಳ ಜೀವನದ ಪ್ರಾಮುಖ್ಯತೆಯ ವಿಷಯದಲ್ಲಿ ಅವಳ ಮೆದುಳಿನಲ್ಲಿ ಅಚ್ಚೊತ್ತಿರಬಹುದಾದ ಸಾಧ್ಯತೆ ಅಲ್ಲಗಳೆಯುವಂತಿಲ್ಲ. ಎಲ್ಲಿಂದ ಕೊಡುತ್ತಾರೆ ಎರಡು ಲಕ್ಷದ ದೊಡ್ಡ ಗಂಟು? 'ಈ ಮದುವೆ ಅಸಾಧ್ಯ' ಎಂದು ನಿರಾಳವೆನ್ನಿಸುತ್ತಿದೆಯೇ? ಛೀ, ಹೊಡೆದುಕೊಳ್ಳಬೇಕು ನನಗೆ ನಾನೇ...

'ಮತ್ತೆ? ಆಗಲ್ಲ ಅಂದ್ರಿ ತಾನೇ?' ಕೇಳಿದ್ದೆ.

'ಊರಲ್ಲಿ ಗದ್ದೆ ಉಂಟಲ್ಲ, ಮೂರು ವರ್ಷಕ್ಕೆ ಅಡ ಇಟ್ಟು ಮದುವೆ ಮಾಡ್ತಾರಂತೆ...'

'ಬುದ್ಧಿ ಇದೆಯೇನೇ ನಿಮಗೆ? ಒಪ್ಕೊಂಡ್ಲಾ ನಿಮ್ಮ ಚಿಕ್ಕಮ್ಮ?'

'..'

'ತಮಾಷಿ ಅಂದ್ಕಂಬೇಡಿ. ವರದಕ್ಷಿಣೆ ಕೊಡೋದು, ತಗೊಳ್ಳೋದು ಎರಡೂ ಅಪರಾಧ. ಜೈಲಿಗೆ ಹಾಕ್ತಾರೆ...'

'ಜೈಲಿಗಾ?' ಬಣ್ಣಗೆಟ್ಟಿತ್ತೇ ಚಂದ್ರಿಯ ಮುಖ? ಕೈಲಿದ್ದ ಹಿಡಿಕುಂಟೆ ಮರೆತು ಬೆಪ್ಪುಕಟ್ಟಿ ನಿಂತಿದ್ದಳು ಹುಡುಗಿ.

'ಹೂಂ ಮತ್ತೆ..'

ಮುಂದೆ ಮಾತಿಲ್ಲ, ಕತೆಯಿಲ್ಲ. ತನ್ನ ಪಾಡಿಗೆ ಕೆಲಸ ಮುಗಿಸಿ ಹೋದ ಚಂದ್ರಿ ಮರುದಿನ ಕೆಲಸಕ್ಕೆ ಬಂದವಳು ಮೊದಲು ವರದಿ ಒಪ್ಪಿಸಿದ್ದು ದುಡ್ಡಿನ ವಿಷಯ.

'ಎರಡು ಲಕ್ಷ ಬೇಡ ಅಂದ್ರಂತೆ ಆಂಟೀ. ಹಂಗೇ ಮದುವೆ ಮಾಡ್ಕಂತಾರಂತೆ...' ರಾತ್ರಿ ಬೆಳಗಾಗುವುದರೊಳಗೆ ವರದಕ್ಷಿಣೆ ಕೇಳಿದವರು ಸುಭಗರಾಗಿಬಿಟ್ಟರೇ? ಇವಳು ತೀರಾ ದಡ್ಡಿ ಅಲ್ಲವಾಗಿದ್ದರೆ ಇವಳೇ ಪ್ಲೇಟು ತಿರುಗಿಸಿರುತ್ತಾಳೆ.